1. ಜನಸಂಖ್ಯೆ ಆಧಾರದ ಮೇಲೆ ವರ್ಗೀಕರಿಸಿದ ಮೆಗಾ/ಮೆಟ್ರೋ ನಗರಗಳು.

2. ನಗರ ಬೆಳವಣಿಗೆಯ ಪ್ರಮಾಣ.

3. ರಾಷ್ಟ್ರೀಯ ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಈ ನಗರಗಳ ಕೊಡುಗೆ.

**ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್** : ಸಚಿವರು ಉತ್ತರ ನೀಡಿದ್ದಾರೆ. ಆದರೆ, ಇಡೀ ಕರ್ನಾಟಕದಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ 2ನೇ ಸ್ಥಾನದಲ್ಲಿದೆ. ಈ ನಗರ ಮೆಗಾಸಿಟಿ ಯೋಜನೆಯಲ್ಲಿ ಬರುವುದಿಲ್ಲವೆಂದರೆ, ಬೇರೆ ರಾಜ್ಯದೊಳಗೆ ಬಹಳಷ್ಟು ಸಿಟಿಗಳನ್ನು ಮೆಗಾಸಿಟಿ ಯೋಜನೆಯಲ್ಲಿ ತೆಗೆದುಕೊಂಡು, ಅಭಿವೃದ್ಧಿಗೆ ಕಾರಣವಾಗಿದೆ. ಆದುದರಿಂದ, ಈ ಯೋಜನೆಯಡಿಯಲ್ಲಿ ತಾವು ತೆಗೆದುಕೊಳ್ಳಬೇಕಾದರೆ ಜನಸಂಖ್ಯೆಯಾಗಲಿ ಅಥವಾ ಬೇರೆ ಬೇರೆ ಯಾವ್ಯಾವ ಕಂಡೀಸನ್‌ಗಳಿವೆ. ಈ ಕಂಡೀಷನ್‌ಗಳನ್ನು ಅಳವಡಿಸಲು ಸರ್ಕಾರವೇನು ಪ್ರಯತ್ನ ಮಾಡಿದೆ ಎಂದು ನಾನು ತಮ್ಮ ಮೂಲಕ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಎಸ್.ಆರ್. ಮೋರೆ** : ಇದನ್ನು ಕೇಂದ್ರಸರ್ಕಾರದವರು ಮಾಡುತ್ತಾರೆ. ಅಂದರೆ, ಮೆಗಾಸಿಟಿ ಆಗಬೇಕಾದರೆ ಕನಿಷ್ಠ 10 ಲಕ್ಷ ಜನಸಂಖ್ಯೆ ಇರಬೇಕು. ಆದಾದಮೇಲೆ, ಅಲ್ಲಿ ಆರ್ಥಿಕವಾಗಿ ರಾಷ್ಟ್ರಕ್ಕೆ ಎಷ್ಟು ಕೊಡುಗೆಯಾಗಿದೆ ಇದರ ಮೇಲೆ ಮೆಗಾಸಿಟಿ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಕೇವಲ ಬೆಂಗಳೂರನ್ನು ಮಾತ್ರ ಇವತ್ತು ಮೆಗಾಸಿಟಿ ಎಂದು ಗುರುತಿಸಲಾಗಿದೆ. ನಮ್ಮ ರಾಷ್ಟ್ರದಲ್ಲಿ 4 ಮೆಗಾಸಿಟಿ ಇವೆ. ಆದರೆ, 1995ರಲ್ಲಿ ಮಾನದಂಡವನ್ನು ಬದಲಾಯಿಸಿ, ಹೈದರಾಬಾದ್ ಮತ್ತು ಬೆಂಗಳೂರನ್ನು ಮಾತ್ರ ಸೇರಿಸಿದ್ದಾರೆ. ಆದರೆ, ನಾವು ಹುಬ್ಬಳ್ಳಿ–ಧಾರವಾಡವನ್ನು ಅಲಕ್ಷ್ಯ ಮಾಡಿಲ್ಲ. ಈಗಾಗಲೇ ಎಡಿಬಿ ಪ್ರಾಜೆಕ್ಟ್‌ನಲ್ಲಿ ಹುಬ್ಬಳ್ಳಿ–ಧಾರವಾಡ ನಾರ್ತ್ ಕರ್ನಾಟಕ ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ನಲ್ಲಿ ಹಾಕಿದ್ದೇವೆ. ಅದಕ್ಕೆ ಸುಮಾರು 286 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಅನ್ನು ನಾವು ತಯಾರಿಸಿದ್ದೇವೆ.

## ರಾಜ್ಯದಲ್ಲಿ ಸ್ಥಗಿತಗೊಂಡಿರುವ ಸಕ್ಕರೆ ಕಾರ್ಖಾನೆಗಳು

49(382) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಸಕ್ಕರೆ ನಿರ್ದೇಶನಾಲಯದ ಮತ್ತು ಸಹಕಾರ ಇಲಾಖೆಯಿಂದ ನೊಂದಾಯಿತ ಕಾರ್ಖಾನೆಗಳವಾರು ಸಂಪೂರ್ಣ ವಿವರ ನೀಡುವುದು) ;

ಆ) ಈ ಪೈಕಿ ಸರ್ಕಾರಿ ಮತ್ತು ಖಾಸಗೀ ಕಾರ್ಖಾನೆಗಳೆಷ್ಟು ? ಅವು ಯಾವುವು ;

ಇ) ಇವುಗಳಲ್ಲಿ ಹಾಲಿ ಅಸ್ಥಿತ್ವದಲ್ಲಿರುವುದೆಷ್ಟು ? ಹಾಗೂ ಸ್ಥಗಿತಗೊಂಡಿರುವವೆಷ್ಟು ;

ಈ) ಸದರಿ ಕಾರ್ಖಾನೆಗಳು ಸ್ಥಗಿತಗೊಳ್ಳಲು ಕಾರಣಗಳೇನು ;

ಉ) ಸ್ಥಗಿತಗೊಂಡ ಕಾರ್ಖಾನೆಗಳ ಕಾರ್ಮಿಕರ ಸಮಸ್ಯೆ ಬಗೆಹರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ;

ಊ) ಇಂತಹವುಗಳ ಪುನಃಶ್ಚೇತನಕ್ಕೆ ಸರ್ಕಾರ ಮುಂದಾಗುವದೇ ಹಾಗೂ ಹಿರಿಯೂರಿನ ವಾಣಿವಿಲಾಸ ಸಹಕಾರ ಸಕ್ಕರೆ ಕಾರ್ಖಾನೆ ಸಮಸ್ಯೆಗೆ ಪರಿಹಾರ ಒದಗಿಸುವಲ್ಲಿ ಸರ್ಕಾರದ ನಿಲುವೇನು?

**ಶ್ರೀ ಪಿ.ಜಿ.ಆರ್.** ಸಿಂಧ್ಯಾ ( ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 44 ಸಕ್ಕರೆ ಕಾರ್ಖಾನೆಗಳಿವೆ. ಜಿಲ್ಲಾವಾರು ವಿವರ ಅನುಬಂಧ–1 ರಲ್ಲಿ ಲಗತ್ತಿಸಿದೆ.

| ಅ) | ವಲಯ | ಸಂಖ್ಯೆ |
|---|---|---|
| | 1. ಸಾರ್ವಜನಿಕ | 02 |
| | 2. ಜಂಟಿ | 01 |
| | 3. ಸಹಕಾರಿ | 21 |
| | 4. ಖಾಸಗಿ | 20 |
| | **ಒಟ್ಟು** | **44** |

| ಆ) | ವಲಯ | ಅಸ್ತಿತ್ವದಲ್ಲಿರುವ ಕಾರ್ಖಾನೆಗಳು | ಸ್ಥಗಿತಗೊಂಡ ಕಾರ್ಖಾನೆಗಳು |
|---|---|---|---|
| | 1. ಸಾರ್ವಜನಿಕ | 02 | – |
| | 2. ಜಂಟಿ | – | 01 |
| | 3. ಸಹಕಾರಿ | 15 | 06 |
| | 4. ಖಾಸಗಿ | 16 | 04 |
| | **ಒಟ್ಟು** | **33** | **11** |

ಈ) ಸದರಿ ಕಾರ್ಖಾನೆಗಳು ಸ್ಥಗಿತಗೊಳ್ಳಲು ಹಲವಾರು ಕಾರಣಗಳು ಇದ್ದು, ಅವುಗಳಲ್ಲಿ ಪ್ರಮುಖವಾಗಿ ಕಬ್ಬಿನ ಕೊರತೆ ಹಾಗೂ ಅಸಮರ್ಪಕ ಆಡಳಿತ ನಿರ್ವಹಣೆ ಇದಲ್ಲದೆ, ಸ್ಥಗಿತಗೊಂಡ ಬಹುತೇಕ ಕಾರ್ಖಾನೆಗಳು ಕಡಿಮೆ ಕಬ್ಬು ನುರಿಸುವ ಸಾಮರ್ಥ್ಯ ಹೊಂದಿದವುಗಳಾಗಿರುತ್ತವೆ ಹಾಗೂ ಹಳೆಯ ಯಂತ್ರೋಪಕರಣಗಳನ್ನು ಹೊಂದಿರುವಂತವುಗಳಾಗಿರುತ್ತವೆ,

ಉ) ಸ್ಥಗಿತಗೊಂಡ ಕಾರ್ಖಾನೆಗಳ ಬಗ್ಗೆ ಈಗಾಗಲೇ ಸಚಿವ ಸಂಪುಟದ ಉಪಸಮಿತಿ ರಚಿಸಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಊ) ಸಹಕಾರ ಸಕ್ಕರೆ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಲು ನೇಮಕವಾಗಿದ್ದ ಸಚಿವ ಸಂಪುಟದ ಉಪಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ವರದಿ ಸರ್ಕಾರದ ಪರಿಶೀಲನೆಯಲ್ಲಿದೆ.

**ಅನುಬಂಧ – 1**

**ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಸ್ಥಾಪಿತವಾಗಿರುವ ಸಕ್ಕರೆ ಕಾರ್ಖಾನೆಗಳ ವಿವರ**

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಕಾರ್ಖಾನೆ | ವಲಯ |
|---|---|---|---|---|
| 01 | ಬೆಳಗಾಂ | ಖಾನಾಪುರ | 01) ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ(ನಿ), ಕುಪ್ಪಟಗಿರಿ | ಸಹಕಾರ |
| | | ಚಿಕ್ಕೋಡಿ | 02) ದೂಧಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ(ನಿ), ಚಿಕ್ಕೋಡಿ | ಸಹಕಾರ |

| 1 | 2 | 3 | 4 | 5 | 6 |
|---|---|---|---|---|---|
| | | ಗೋಕಾಕ್ | 03) | ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ(ನಿ), ಗೋಕಾಕ್ | ಸಹಕಾರ |
| | | ನಿಪ್ಪಾಣಿ | 04) | ಹಾಲಸಿದ್ದನಾಥ ಸಹಕಾರ ಸಕ್ಕರೆ ಕಾರ್ಖಾನೆ(ನಿ), ನಿಪ್ಪಾಣಿ | ಸಹಕಾರ |
| | | ಹುಕ್ಕೇರಿ | 05) | ಹಿರಣ್ಯಕೇರಿ ಸಹಕಾರಿ ಸಕ್ಕರೆ ಕಾರ್ಖಾನೆ(ನಿ), ಸಂಕೇಶ್ವರ | ಸಹಕಾರ |
| | | ಬೈಲಹೊಂಗಲ | 06) | ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ(ನಿ), ಎಂ.ಕೆ. ಹುಬ್ಬಳ್ಳಿ | ಸಹಕಾರ |
| | | ರಾಯಬಾಗ್ | 07) | ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆ(ನಿ) ರಾಯಬಾಗ್ | ಸಹಕಾರಿ |
| | | ಅಥಣಿ | 08) | ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ(ನಿ), ಅಥಣಿ. | ಸಹಕಾರ |
| | | ಸೌಂದತ್ತಿ | 09) | ರೇಣುಕಾ ಶುಗರ್ಸ್, ಮುನವಳ್ಳಿ | ಖಾಸಗಿ |
| | | ಅಥಣಿ | 10) | ಉಗಾರ್ ಶುಗರ್ ವರ್ಕ್ಸ್, ಉಗಾರ್‌ಖುರ್ದ್ | ಖಾಸಗಿ |
| | | ಅಥಣಿ | 11) | ಅಥಣಿ ಫಾರ್ಮರ್ಸ್ ಶುಗರ್ ವರ್ಕ್ಸ್, ಅಥಣಿ | ಖಾಸಗಿ |
| | | ಚಿಕ್ಕೋಡಿ | 12) | ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಬೇಡಕಿಹಾಳ್ | ಖಾಸಗಿ |
| 02 | ಬಳ್ಳಾರಿ | ಹೊಸಪೇಟೆ | 13) | ಇಂಡಿಯ ಶುಗರ್ಸ್ & ರಿಫೈನರೀಸ್ ಲಿ. ಹೊಸಪೇಟೆ | ಖಾಸಗಿ |
| | | ಹೊಸಪೇಟೆ | 14) | ಸುಂದರಿ ಶುಗರ್ಸ್, ಕಂಪ್ಲಿ | ಖಾಸಗಿ |
| | | ಸಿರಗುಪ್ಪ | 15) | ಸಿರಗುಪ್ಪ ಶುಗರ್ಸ್ & ಕೆಮಿಕಲ್ಸ್ ದೇಶನೂರು | ಖಾಸಗಿ |
| 03 | ಬೀದರ್ | ಬೀದರ್ | 16) | ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಹಳ್ಳಿಖೇಡ್ | ಸಹಕಾರ |
| | | ಬೀದರ್ | 17) | ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ(ನಿ), ಇಮಾಂಪುರ | ಸಹಕಾರ |
| | | ಭಾಲ್ಕಿ | 18) | ಮಹಾತ್ಮಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆ(ನಿ) | ಸಹಕಾರ |
| 04 | ಬಿಜಾಪುರ | ಬಿಜಾಪುರ | 19) | ನಂದಿ ಸಹಕಾರ ಸಕ್ಕರೆ ಕಾರ್ಖಾನೆ(ನಿ), ಕೃಷ್ಣಾನಗರ | ಸಹಕಾರ |
| 05 | ಬಾಗಲಕೋಟೆ | ಮುಧೋಳ್ | 20) | ರೈತರ ಸಹಕಾರ ಸಕ್ಕರೆ ಕಾರ್ಖಾನೆ(ನಿ), ರನ್ನನಗರ | ಸಹಕಾರ |
| | | ಮುಧೋಳ್ | 21) | ಗೋದಾವರಿ ಶುಗರ್ಸ್ ಲಿ, ಸಮೀರವಾಡಿ | ಖಾಸಗಿ |
| | | ಜಮಖಂಡಿ | 22) | ಪ್ರಭುಲಿಂಗೇಶ್ವರ ಶುಗರ್ಸ್ ಲಿ., ಸಿದ್ದಾಪುರ | ಖಾಸಗಿ |
| | | ಜಮಖಂಡಿ | 23) | ಜಮಖಂಡಿ ಶುಗರ್ಸ್ ಲಿ., ಹಿರೇಪಡಸಲಗಿ | ಖಾಸಗಿ |

**ಶ್ರೀ ಜಗದೀಶ್ ಶೆಟ್ಟರ್** : ಸಕ್ಕರೆ ಕಾರ್ಖಾನೆಗಳ ಬಗ್ಗೆ, ಖಾಸಗಿ ಎಷ್ಟಿವೆ, ಸಹಕಾರಿ ರಂಗದಲ್ಲಿ ಎಷ್ಟಿವೆ ಎನ್ನುವ ಪ್ರಶ್ನೆಗೆ, ಅವರು ಉತ್ತರದಲ್ಲಿ, ಒಟ್ಟು 44 ಸಕ್ಕರೆ ಕಾರ್ಖಾನೆಗಳು ನಮ್ಮ ರಾಜ್ಯದಲ್ಲಿದ್ದು, 21 ಸಹಕಾರಿ ರಂಗದಲ್ಲಿಯೂ, 20 ಖಾಸಗಿ ರಂಗದಲ್ಲಿಯೂ ಮತ್ತು ಜಂಟಿ ಹಾಗೂ ಸಾರ್ವಜನಿಕವಾಗಿ 2,1 ಈ ರೀತಿ ಒಟ್ಟು 44 ಕಾರ್ಖಾನೆಗಳಿವೆ ಎಂದು ಹೇಳಿದ್ದಾರೆ, ನಮ್ಮ ರಾಜ್ಯದಲ್ಲಿ ಸಹಕಾರಿ ರಂಗದಲ್ಲಿ 21 ಕಾರ್ಖಾನೆಗಳಿವೆ. ಆದರೆ, ಇವತ್ತು ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿ ಏನಾಗಿದೆ ಎಂದರೆ, ಅದರಲ್ಲಿ ಸಹಕಾರಿ ರಂಗದಲ್ಲಿ ಇದ್ದಂಥವು ಆಲ್‌ಮೋಸ್ಟ್ ಕ್ಲೋಷರ್‌ಗೆ ಬಂದಿವೆ. ದಿವಾಳಿ ಎದ್ದಿವೆ. ಆರ್ಥಿಕ ನಷ್ಟ ಮತ್ತು ಅವ್ಯವಹಾರದಿಂದಾಗಿ ಸಂಪೂರ್ಣವಾಗಿ ಕೊಲ್ಯಾಪ್ಸ್ ಆಗಿ, ಅದರಿಂದ ಆ ಸಹಕಾರಿ ರಂಗಕ್ಕೆ ಕೆಟ್ಟ ಹೆಸರು ಬಂದಿದೆ, ಅದರ ಜೊತೆಗೆ, ನಮ್ಮ ಕಬ್ಬು ಬೆಳೆಗಾರರು ಸಂಕಷ್ಟದಲ್ಲಿರುವುದನ್ನು ನಾವು ನೋಡುತ್ತಿದ್ದೇವೆ. ಅದಕ್ಕಾಗಿ, ಮಾನ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ, ಇವತ್ತು ಒಂದೊಂದು ಕಾರ್ಖಾನೆಗಳಲ್ಲಿಯೂ 10,15,20 ಕೋಟಿ ರೂಪಾಯಿಗಳಷ್ಟು ಬಾಕಿಯನ್ನು ನಮ್ಮ ಕಬ್ಬು ಬೆಳೆದ ರೈತರಿಗೆ ಕೊಡುವುದಿದೆ. ಸಕ್ಕರೆ ಕಾರ್ಖಾನೆಗಳಿಂದ 300 ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಕಬ್ಬು ಬೆಳೆಗಾರರಿಗೆ ಬಾಕಿ ಇದೆ. ಆ ಬಗ್ಗೆ ನಮ್ಮ ರೈತ ಬಾಂಧವರಿಗೆ ಬಾಕಿ ಕೊಡಿಸಲು ಸರ್ಕಾರದ ಕಡೆಯಿಂದ ಏನು ಪ್ರಯತ್ನ ಆಗಿದೆ ಎಂಬ ಬಗ್ಗೆ ಉತ್ತರ ಹೇಳಬೇಕು. ಕೆಲವು ಸಕ್ಕರೆ ಕಾರ್ಖಾನೆಗಳಲ್ಲಿ ಏನು ಅವ್ಯವಹಾರ ಇದೆ, ಭಾಗ್ಯಲಕ್ಷ್ಮಿ ಷುಗರ್ಸ್ ಇರಬಹುದು, ರಾಯಭಾಗ, ಆಳಂದ ಇರಬಹುದು. ಸಹಕಾರಿ ಕಾರ್ಖಾನೆಗಳಲ್ಲಿ ಅವ್ಯವಹಾರವಾಗಿದೆ. ಅದಕ್ಕೆ ಸಂಬಂಧಪಟ್ಟವರ ಮೇಲೆ ಕಾನೂನಿ ಕ್ರಮಗಳನ್ನು ಕೈಗೊಂಡು, ಅವರಿಗೆ ಶಿಕ್ಷೆ ಕೊಡುವಂಥಾದ್ದು ಮಾಡುವ ಬಗ್ಗೆ, ಕಾನೂನು ಕ್ರಮ ಕೈಗೊಂಡಿದ್ದಾರೆಯೇ ಏನ್ನುವ ಬಗ್ಗೆ ಉತ್ತರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಎರಡು ವಿಷಯಗಳ ಬಗ್ಗೆ ಉತ್ತರ ಹೇಳಿದರೆ, ನಾನು ಇನ್ನೊಂದೆರಡು ಉಪ ಪ್ರಶ್ನೆ ಕೇಳುತ್ತೇನೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಮಾನ್ಯ ಅಧ್ಯಕ್ಷರೆ, ಸಹಕಾರಿ ಕ್ಷೇತ್ರದಲ್ಲಿ ನಡೆಯತಕ್ಕಂಥ ರಾಯಬಾಗ್, ಭಾಗ್ಯಲಕ್ಷ್ಮಿ ಆಳಂದ, ಸ್ಕಕರೆ ಕಾರ್ಖಾನೆಗಳೇನು ಇವೆ. ಇವುಗಳಲ್ಲಿ ಅವ್ಯವಹಾರ ನಡೆದಿರತಕ್ಕಂಥದ್ದು ಅದರ ಪ್ರಕಾರವಾಗಿ ಕಾನೂನು ಪ್ರಕಾರವಾಗಿ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳಬೇಕು ಎನ್ನುವಂಥ ಸಲಹೆಯನ್ನು ಮಾನ್ಯ ಶೆಟ್ಟರ್‌ಅವರು ನೀಡಿದ್ದಾರೆ, ಖಂಡಿತವಾಗಿ ನಾನು ಅವರಿಗೆ ಭರವಸೆ ಕೊಡುತ್ತೇನೆ. ಕಾನೂನಿನ ಪ್ರಕಾರವಾಗಿ ಏನು ಕ್ರಮ ಕೈಗೊಳ್ಳಬೇಕು ಆ ಪ್ರಕಾರವಾಗಿ ನಾವು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ಈಗಾಗಲೇ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಉದಾಹರಣೆಗೆ ಈಗಾಗಲೇ ಈ ತನಿಖೆಗೆ ಸಿಓಡಿ ತನಿಖೆಗೆ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಉದಾಹರಣೆಗೆ ಈಗಾಗಲೇ ಈ ತನಿಖೆಗೆ ಸಿಓಡಿ ತನಿಖೆಗೆ ಆರ್ಡರ್ ಮಾಡಿದ್ದಾರೆ. Rule 64. According to the co-operative Actಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಮಾಡಿದ್ದಾರೆ. But I promise you. we will expendite the matter. ಎನ್‌ಕ್ವೆಯರಿ ಎಂದು ಹೇಳಿ ಸುಮ್ಮನೆ ಬಿಟ್ಟು ಬಿಟ್ಟರೆ ಉಪಯೋಗವಾಗುವುದಿಲ್ಲ. ಏಕೆಂದರೆ, ರಾಜ್ಯದಲ್ಲಿ 44 ಸಕ್ಕರೆ ಕಾರ್ಖಾನೆಗಳಲ್ಲಿ 11 ಸಕ್ಕರೆ ಕಾರ್ಖಾನೆಗಳು 2003–04 ರಲ್ಲಿ ಕ್ರಷ್ ಮಾಡಿಲ್ಲ. ನಿಂತು ಹೋಗಿತ್ತು. ಅಂದರೆ 33 ಆ್ಯಕ್ಟುವಲ್ ಆಗಿ ಪಂಕ್ಷನ್‌ನಲ್ಲಿ ಇರತಕ್ಕಂಥವು. ಅದರಲ್ಲಿ ಸಿರಗುಪ್ಪದಲ್ಲಿ 2, ಗೌರಿಬಿದನೂರು, ಸುಂದರಿ, ಮಾದೇಶ್ವರ, ಗಂಗಾವರಿ, ಪಾಂಡವಪುರ, ದಕ್ಷಿಣ ಕನ್ನಡ, ವಾಣಿವಿಲಾಸ ಆಳಂದ, ಭಾಗ್ಯಲಕ್ಷ್ಮಿ ರಾಯಬಾಗ್, ಇವೆಲ್ಲಾ ನಿಲ್ಲದೇ ಇರುವುದು

ಸೇರಿಕೊಳ್ಳುತ್ತವೆ. ಈಗ ತಾವು ಏನು ಹೇಳಿದಿರಿ ಅಂದರೆ, ಈಗ ಸೆಪ್ಟೆಂಬರ್ 2003ಕ್ಕೆ ನಾವು ನೀವು ವಿರೋಧ ಪಕ್ಷದಲ್ಲಿ ಕುಳಿತಿರತಕ್ಕಂಥ ಸಂದರ್ಭದಲ್ಲಿ ಸುಮಾರು 300 ಕೋಟಿ ರೂಪಾಯಿ ರೈತರಿಗೆ ಡ್ಯೂಸ್ ಇತ್ತು. 300 crores was the due amount to the farmers. ರೈತರಿಗೆ ಬರಬೇಕಾದಂಥ 300 ರೂ ಇತ್ತು ಈಗ ಇದು ಈ ತಿಂಗಳಿನಲ್ಲಿ 100 ಕೋಟಿ ರೂಪಾಯಿಗೆ ಇಳಿದಿದೆ. 100 ಕೋಟಿ ರೂ ಬಾಕಿ ಇದೆ. ಇದನ್ನು ಯಾವ ರೀತಿ ನೀವು ಕೊಡುತ್ತೀರಿ ಎನ್ನತಕ್ಕಂಥ ಪ್ರಶ್ನೆ ಹಾಗೂ ಯಾವಾಗ ಕೊಡುತ್ತೀರಿ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದ್ದಾರೆ. ನಿನ್ನೆ ತಾನೇ ನಮ್ಮ ಚಾಮರಾಜನಗರ ಜಿಲ್ಲೆ ಮತ್ತು ಮೈಸೂರು ಜಿಲ್ಲೆಯ ಹಾಗೂ ಉತ್ತರ ಕರ್ನಾಟಕದ ಕೆಲವು ರೈತ ಮುಖಂಡರುಗಳು, ಮಾನ್ಯ ಮುಖ್ಯಮಂತ್ರಿಗಳನ್ನು ಈ ಸಕ್ಕರೆ ಕಾರ್ಖಾಣೆಗಳ ಮನಃಶ್ಚೇತನದ ಬಗ್ಗೆ ಹಾಗೂ ಸಕ್ಕರೆ ಕಾರ್ಖಾನೆಗಳಿಂದ ಬಾಕಿ ಬರಬೇಕಾದಂಥ ಸಾಲಗಳ ಬಗ್ಗೆ ಅವರೊಂದು ಮನವಿಯನ್ನು ಕೊಟ್ಟಿದ್ದಾರೆ. ನಿನ್ನೆ ದಿನ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಕಬ್ಬು ಬೆಳೆಗಾರರಿಗೆ ಒಂದು ಭರವಸೆಯನ್ನು ಕೊಟ್ಟಿದ್ದಾರೆ. ಕಬ್ಬು ಬೆಳೆಗಾರರ ಪ್ರತಿನಿಧಿಗಳ ಸಕ್ಕರೆ ಕಾರ್ಖಾನೆಗಳ ಸಹಕಾರಿ ಕ್ಷೇತ್ರ, ಜಂಟಿ ಕ್ಷೇತ್ರ ಹಾಗೂ ಖಾಸಗೀ ಕ್ಷೇತ್ರ ಈ ಮೂರು ಕ್ಷೇತ್ರಗಳಲ್ಲಿ ಇವೆ. ಇವುಗಳ ಮಾಲೀಕರ ಒಂದು ಸಭೆಯನ್ನು ಎರಡು ವಾರಗಳಲ್ಲಿ ಕರೆಯತಕ್ಕಂಥ ಒಂದು ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಏಕೆಂದರೆ, ಕಳೆದ ಮೂರು ವರ್ಷಗಳಲ್ಲಿ ಬರಗಾಲ ಪೂರ್ಣವಾಗಿತ್ತು. ಈ ಸಾರಿ ಸ್ವಲ್ಪ ಚೇತರಿಸಿಕೊಂಡಿದ್ದಾರೆ. ಸ್ವಲ್ಪ ಕಬ್ಬು ಬರಬಹುದು. ಆದರೂ ಸಹಿತ ಸ್ವಲ್ಪ ಕಬ್ಬಿನ ಶಾರ್ಟೇಜ್ ಇರುತ್ತದೆ ಎನ್ನತಕ್ಕಂಥದ್ದು ಒಂದು ಅಸೆಸ್‌ಮೆಂಟ್ ಇದೆ. ಜುಲೈನಲ್ಲಿ ಒಂದು ಸೀಜನ್ ಸೌತ್ ಕರ್ನಾಟಕದಲ್ಲಿ ಶುರುವಾಗುತ್ತದೆ. ಅಕ್ಟೋಬರ್, ನವೆಂಬರ್‌ನಲ್ಲಿ ನಾರ್ತ್ ಕರ್ನಾಟಕದಲ್ಲಿ ಶುರುವಾಗುತ್ತದೆ ಸ್ವಲ್ಪ ಶಾರ್ಟೇಜ್ ಬರಬಹುದು. ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪ್ರಾರ್ಥನೆ ಮಾಡಿದ್ದೇವೆ, ಏನು ವಿನಂತಿ ಮಾಡಿದ್ದೇವೆ ಎಂದರೆ, ಈ ಸಕ್ಕರೆ ಕಾರ್ಖಾನೆಗಳು ಯಾರು ತೊಂದರೆಯಲ್ಲಿ ಇದ್ದಾರೆ ಅವರಿಗೆ ಬಾರೋಯಿಂಗ್ ಮಾಡುವುದಕ್ಕೆ ಅವಕಾಶ ಆಗುತ್ತಿಲ್ಲ, ಸಾಲ ಜಾಸ್ತಿಯಾಗಿದೆ ಅವರು ಬಾರೋಯಿಂಗ್ ಮಾಡಿಕೊಳ್ಳಲಿಕ್ಕೆ ಈಗ ಆಗುತ್ತಿಲ್ಲ. ಅದಕ್ಕೋಸ್ಕರವಾಗಿ ಈ ಲಾಂಗ್ ಟರ್ಮ್ ಲೋನ್‌ಗಳನ್ನು ರೀಫೇಸ್ ಮಾಡಲಿಕ್ಕೆ ಮತ್ತು ಮೀಡಿಯಮ್ ಟರ್ಮ್ ಲೋನ್‌ಗಳನ್ನು ರೀಷ್ಡ್ಯೂಲ್ ಮಾಡುವುದಕ್ಕೆ ಅವಕಾಶವನ್ನು ಕೇಂದ್ರ ಸರ್ಕಾರದವರು ಮಾಡಿ ಕೊಟ್ಟರೆ, ಫರ್‌ದರ್ ಬಾರೋ ಮಾಡಲಿಕ್ಕೆ ಈ ಇಂಡ್‌ಸ್ಟ್ರೀಸ್‌ಗಳಿಗೆ ಅನುಕೂಲವಾಗುತ್ತದೆ. ಅಲ್ಲದಿದ್ದರೆ ಈ ಇಂಡಸ್ಟ್ರೀಸ್‌ಗಳಿಗೆ ಅನುಕೂಲವಾಗುತ್ತದೆ. ಅಲ್ಲದಿದ್ದರೆ ಈ ಕ್ರಷಿಂಗ್ ಸೀಜನ್ ಆದ ತಕ್ಷಣವೇ ತೊಂದರೆಯಾಗುತ್ತಿದೆ ಎನ್ನುವುದು ಗೊತ್ತಿದೆ. ಅದಕ್ಕಾಗಿಯೇ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯನ್ನು ಕರೆಸುತ್ತಿದ್ದಾರೆ. ಮತ್ತು ಕೇಂದ್ರ ಸರ್ಕಾರಕ್ಕೆ ನಾವು ಬೆರಳು ತೋರಿಸಿ ನಮ್ಮ ಜವಾಬ್ದಾರಿಯನ್ನು ಕಳೆದು ಕೊಳ್ಳುವುದಕ್ಕೆ ತಯಾರಿಲ್ಲ. I will find out some means after the cabinet reshuffle. ಅಧಿವೇಶನ ಮುಗಿದ ನಂತರ ನಾವು ಕುಳಿತುಕೊಂಡು ನಾವು, ಮಾನ್ಯ ಮುಖ್ಯಮಂತ್ರಿಗಳು, ಸಕ್ಕರೆಗೆ ಸಂಬಂಧಪಟ್ಟಂಥ ಎಲ್ಲಾ ಮುಖಂಡರುಗಳನ್ನು ಕರೆಸಿ ಮಾತನಾಡಿ ಆದಷ್ಟು ಬೇಗ ನೂರು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ.

**ಶ್ರೀ ಜಗದೀಶ್ ಶೆಟ್ಟರ್** : ಮತ್ತೊಂದು ಉಪ ಪ್ರಶ್ನೆ. ಇಲ್ಲಿ ಪುನಃಶ್ಚೇತನದ ಬಗ್ಗೆ ಮೀಟಿಂಗ್ ಕರೆದು ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಮಾನ್ಯ ಸಿಂಧ್ಯಾರವರು ಹೇಳಿದರು. ಇದರ ಜೊತೆಗೆ ಮತ್ತೊಂದು ಮಹತ್ವದ ವಿಷಯ ಎಂದರೆ, ಇವತ್ತೇನು ಕೋ-ಜನರೇಷನ್ ಪವರ್ ಪ್ರೊಡ್‌ಕ್ಷನ್

ಆಲ್‌ಮೋಸ್ಟ್ ಎಲ್ಲಾ ಫ್ಯಾಕ್ಟರಿಗಳು ಮಾಡುತ್ತಿದ್ದಾರೆ. ಅದರಲ್ಲಿ ನೀವು ಏನು ಹೊಸದಾಗಿ ಪರ್ಮಿಷನ್ ಕೊಡುವವರಿಗಿಂತೂ ಈ ಕೋ-ಜನರೇಷನ್, ಪವರ್ ಪ್ರೊಡೆಕ್ಷನ್ ಮಾಡಲಿಕ್ಕೆ ಬೇಕು ಇದು ಕಂಪಲ್‌ಸರಿ ಎನ್ನುವ mandate ಆಗುತ್ತಿದೆ. ಮತ್ತೊಂದು ಏನೆಂದರೆ, ಹಿಂದಿನ ಸರ್ಕಾರ ಪಿಪಿಎ Power Purchase Agreement ಎಷ್ಟೋ ಷುಗರ್ ಫ್ಯಾಕ್ಟರಿಗಳ ಜೊತೆ ಅಗ್ರಿಮೆಂಟ್ ಮಾಡಿತ್ತು. ಅಲ್ಲಿ 3 ರೂಪಾಯಿ 24 ಪೈಸೆಯಂತೆ ಪರ್ ಯೂನಿಟ್‌ನಂತೆ ಪವರ್ ಪರ್ಚೇಸ್ ಮಾಡಲಿಕ್ಕೆ ಮೊದಲು ಒಪ್ಪಿಕೊಂಡಿದ್ದರು. ನಂತರ ಅದು ಆಗುವುದಿಲ್ಲವೆಂದು ಹೇಳಿದರು. ಕೊನೆಗೆ 2 ರೂಪಾಯಿ 75 ಪೈಸೆ ಪರ್ ಯೂನಿಟ್ಟ ಹಾಗೆ ಪರ್ಚೆಸ್ ಮಾಡಲಿಕ್ಕೆ ಸರ್ಕಾರ ಒಪ್ಪಿಕೊಂಡರು. ಆ ರೀತಿ ಎಷ್ಟೋ ಫ್ಯಾಕ್ಟರಿಯ ಜೊತೆ ಪಿಪಿಎ ಕೂಡ ಆದವು. ಆ ರೀತಿ ಕೋ-ಜನರೇಷನ್. ಪವರ್ ಪ್ರೊಡೆಕ್ಷನ್ ಚಾಲೂ ಮಾಡಿದರು. ಆದರೆ ಆ ಎಲ್ಲಾ ಪಿಪಿಎಗಳನ್ನು ಸರ್ಕಾರ ರದ್ದು ಮಾಡಿದೆ. ನಾನು ಹೇಳುವುದು ಏನೆಂದರೆ, ಒಂದು ಕಡೆ ವಿದ್ಯುತ್ತಿನ ಅಭಾವದಿಂದ ನಾವು ಬೇರೆ ರಾಜ್ಯಗಳಿಂದ ವಿದ್ಯುತ್ ಪರ್ಚೇಸ್ ಮಾಡುತ್ತಿದ್ದೇವೆ. ಅದು ಯೂನಿಟ್‌ಗೆ ಎಷ್ಟು ಎನ್ನುವುದನ್ನು ಸರ್ಕಾರವೇ ಅದನ್ನು ಡಿಸ್‌ಕ್ಲೋಸ್ ಮಾಡಬೇಕಾಗುತ್ತದೆ. ಏಕೆಂದರೆ, ಈ 2-75 ಪೈಸೆ ಬಹಳ ಚೀಪ್ ಆಗುತ್ತದೆ. ಈ ರೀತಿ ಅವರು 2.75 ಪೈಸೇ ಪರ್ ಯೂನಿಟ್ ಅವರು ಕೊಡಲಿಕ್ಕೆ ತಯಾರಿರುವಾಗ ನಾವು ಇವರ ಕಡೆಯಿಂದ ಏಕೆ ಪರ್ಚೆಸ್ ಮಾಡಬಾರದು ? ಏಕೆಂದರೆ, ಸಕ್ಕರೆ ಕಾರ್ಖಾನೆಗಳು ಇವತ್ತು ಆರ್ಥಿಕವಾಗಿ ದುಸ್ಥಿತಿಯಲ್ಲಿ ಇವೆ. ನಮ್ಮ ರೈತರಿಗೆ ಪೇಮೆಂಟ್ ಮಾಡಲಿಕ್ಕೆ ಆಗುತ್ತಿಲ್ಲ, ನೀವು ಪವರ್ ಅನ್ನು ಪರ್ಚೇಸ್ ಮಾಡಲಿಕ್ಕೆ ಚಾಲೂ ಮಾಡಿದರೆ ಅವರಿಗೆ ಅದೊಂದು ಇನ್‌ಕಂ ಆಗುತ್ತದೆ ಅದರಿಂದ ಅವರು ರೈತರಿಗೆ ಪೇಮೆಂಟ್ ಮಾಡಲಿಕ್ಕೆ ಸಾಧ್ಯವಿದೆ. ಹೀಗಾಗಿ ಪಿಪಿಎ ಬಗ್ಗೆ ತಾವು ರೀಕನ್ಸಿಡರೇಷನ್ ಮಾಡಬೇಕು. ಮತ್ತೆ ಪವರ್ ಅನ್ನು ಪರ್ಚೇಸ್ ಮಾಡಬೇಕು. ಇದು ಒಂದು ಮತ್ತೊಂದು ಏನೆಂದರೆ, ಇಥೆನಾಲ್ ಪ್ರೊಡೆಕ್ಷನ್‌ಗೆ ತಾವು ಹೆಚ್ಚಿನ ಎನ್‌ಕರೇಜ್‌ಮೆಂಟ್ ಕೊಡಬೇಕು. ಆದುದರಿಂದ ಪೆಟ್ರೋಲ್ ಬಳಕೆ ಕಡಿಮೆಯಾಗುತ್ತಿದೆ. 5 ರಿಂದ 10 ಪರ್ಸೆಂಟ್ ಅಲ್ಲಿ ಮಿಕ್ಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ಒಂದು ಮಹಾರಾಷ್ಟ್ರದಲ್ಲಿ ಈಗಾಗಲೇ ಆ ಬಗ್ಗೆ ಥಿಂಕಿಂಗ್ ನಡೆದಿದೆ. ಇನ್ನೊಂದು ನಾನು ಹೇಳುವುದು, ಮಹಾರಾಷ್ಟ್ರದಲ್ಲಿ ರಾ-ಷುಗರ್ಸ್ ಎಂದು ಬ್ರಿಜಿಲ್ ದೇಶದಿಂದ ಇಂಪೋರ್ಟ್ ಮಾಡುವ ಬಗ್ಗೆ ಮಾನ್ಯ ಶರದ್‌ಪವಾರ್ ಅವರು ಅಲ್ಲಿ ಥಿಂಕಿಂಗ್ ಮಾಡುತ್ತಿದ್ದಾರೆ. ಆ ರಾ-ಷುಗರ್ಸ್ ಮಾಡುವುದರಿಂದ ಏನಾಗುತ್ತದೆ ಎಂದರೆ, ಇಂಪೋರ್ಟ್ ಮಾಡಿಕೊಂಡು ನಮ್ಮ ಷುಗರ್ಸ್ ಫ್ಯಾಕ್ಟರಿಗೆ ಕೊಡುವುದರಿಂದ 365 ದಿನಗಳು ಕಂಪ್ಲೀಟ್ ವರ್ಷವಿಡಿ ಷುಗರ್ಸ್ ಫ್ಯಾಕ್ಟರಿಯಲ್ಲಿ ಪ್ರೊಡೆಕ್ಷನ್ ಮಾಡಬಹುದು. ಇಲ್ಲದಿದ್ದರೆ ಸೀಜನಲ್ ಅಷ್ಟೇ ಆಗುತ್ತದೆ. ರಾ-ಷುಗರ್ಸ್ ಬ್ರಿಜಿಲ್ ದೇಶದಿಂದ ಇನ್‌ಪೋರ್ಟ್ ಮಾಡುವುದರ ಬಗ್ಗೆಯೂ ತಾವು ಕನ್ಸಿಡರೇಷನ್ ಮಾಡುವಂಥದ್ದು ಆಗಬೇಕು. ಮತ್ತು ಇನ್ನೊಂದು ಏನೆಂದರೆ, ಮಹಾರಾಷ್ಟ್ರದ ಶರದ್ ಪವಾರ್ ಅವರು, ತಮಗೆ ಬಹಳ ಆತ್ಮೀಯರು. ಈಗಾಗಲೇ ಅವರು ಮಹಾರಾಷ್ಟ್ರದಲ್ಲಿ ವಿಶೇಷವಾದಂಥ ಪ್ಯಾಕೇಜ್ ಬಗ್ಗೆ ಪುನಃಶ್ಚೇತನದ ಬಗ್ಗೆ ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ತಾವು ಒಂದು ಸ್ವಲ್ಪ ರಾಜಕೀಯವಾದಂಥ ಇನ್‌ಫ್ಲೂಯೆನ್ಸ್ ಕೇಂದ್ರ ಸರ್ಕಾರದ ಮೇಲೆ ತಂದು, ಕರ್ನಾಟಕ ಷುಗರ್ಸ್ ಫ್ಯಾಕ್ಟರಿಯ ಬಗ್ಗೆ ಏನು ವಿಚಾರ ಮಾಡುತ್ತೀರಿ ಎಂಬುದನ್ನು ತಾವು ಹೇಳಬೇಕು.

**ಶ್ರೀ ಪಿ.ಜಿ.ಆರ್. ಸಿಂಧ್ಯಾ** : ಗೌರವಾನ್ವಿತ ಸದಸ್ಯರು ಈ Power Purchase Agreement ಬಗ್ಗೆ ಪುನರ್ ವಿಮರ್ಶೆ ಮಾಡಬೇಕು. ಹಿಂದೆ ಆಗಿರುವಂಥದ್ದನ್ನು ಕ್ಯಾನ್ಸಲ್

ಮಾಡಿದ್ದಾರೆ ಎಂದು ಹೇಳಿದ್ದಾರೆ. ನಮಗೆ ಈಗಿರತಕ್ಕಂಥ ಪವರ್‌ಗೆ ಕಡಿಮೆ ರೇಟ್‌ನಲ್ಲಿ ಕೊಡುವುದಾದರೆ ಏಕೆ ತೆಗೆದುಕೊಳ್ಳಬಾರದು ಎಂದು ಕೇಳಿದ್ದಾರೆ. ಈ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ. ಈಗಾಗಲೇ ನಾವು ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ We have already constituted a cabinet sub committee to look into these matters; to re-examine the whole thing.

ಆ ರೀತಿ Power Purchase Agreement ಮಾಡಿಕೊಂಡು ಕ್ಯಾನ್ಸಲ್ ಆಗಿದ್ದರೆ, we will re-consider it. ಇದು ಮೊದಲನೆಯದು. ನಂತರ ಇಥೆನಾಲ್ ಬ್ಲೆಂಡಿಂಗ್ ಬಗ್ಗೆ ಪೆಟ್ರೋಲ್ ಇದರಲ್ಲಿ Government of India statutory permission ಈಗಾಗಲೇ ಸಿಕ್ಕಿದೆ, ಆದುದರಿಂದ, ನಾನು ಖಂಡಿತವಾಗಿ ಈ ಒಂದು ಇಥೆನಾಲ್ ಪ್ರೊಡೆಕ್ಷನ್ ಬಗ್ಗೆ ಎನ್‌ಕರೇಜ್ ಮಾಡಬೇಕೆಂದು ಹೇಳಿದ್ದೀರಿ, we will definitely do that. ಆಮೇಲೆ ಮಾನ್ಯ ಶರದ್ ಪವಾರ್ ಅವರು ಸಕ್ಕರೆಗೆ ಸಂಬಂಧಪಟ್ಟಂಥ ಮಂತ್ರಿಗಳಾಗಿದ್ದಾರೆ. ಷುಗರ್ ಕೇನ್‌ಗೆ ಸಂಬಂಧಪಟ್ಟಂಥ ಮಂತ್ರಿಗಳಾಗಿದ್ದಾರೆ. ಅವರು ಈಗಾಗಲೇ ಮಹಾರಾಷ್ಟ್ರಕ್ಕೆ ಅಲ್ಲಿರತಕ್ಕಂಥ ಷುಗರ್ ಕೇನ್ ಡ್ಯೂಸ್ ನ್ನು ಕ್ಲಿಯರ್ ಮಾಡಲಿಕ್ಕೆ ಎಂದು 500 ಕೋಟಿ ರೂಪಾಯಿ ಸ್ಪೆಷಲ್ ಪ್ಯಾಕೇಜ್ ಅನ್ನು ತೆಗೆದುಕೊಂಡು ಹೋಗಿದ್ದಾರೆ. ತಮಿಳುನಾಡು ಸರ್ಕಾರದವರು ಸಹ ತೆಗೆದುಕೊಂಡು ಹೋಗಿದ್ದಾರೆ, ನಾನು ಕೇಂದ್ರ ಸರ್ಕಾರಕ್ಕೆ ಹೇಳಿದೆ. ಈ ಲಾಂಗ್ ಟರ್ಮ್ ಲೋನ್ಸ್ ಮತ್ತು ಮೀಡಿಯಮ್ ಟರ್ಮ್ಸ್ ಲೋನ್ ರೀಫೇಸ್ ಮಾಡಲಿಕ್ಕೆ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿದ್ದೇವೆ, ಏಕೆ ಒಂದು ಪ್ಯಾಕೇಜನ್ನು ಕೇಳಬಾರದು ಎಂದು ಹೇಳಿದ್ದೀರಿ, ಅದನ್ನೂ ನಾವು ಪರಿಶೀಲನೆ ಮಾಡುತ್ತೇವೆ.

**ಅಧ್ಯಕ್ಷರು** : ಪ್ರತಿ ಪ್ರಶ್ನೆಗೆ ಈ ರೀತಿ ಆದರೆ ನಾನು ಅನೇಕ ಪ್ರಶ್ನೆಗಳನ್ನು ಕೈ ಬಿಡಬೇಕಾಗುತ್ತದೆ. ಅದು ಸಾಧ್ಯವಾಗುವುದಿಲ್ಲ. ದಯಮಾಡಿ ಸಹಕರಿಸಬೇಕು. ಶ್ರೀಮತಿ ಶಂಕುತಲಾ ಶೆಟ್ಟಿಯವರೇ ನಿಮ್ಮ ಪ್ರಶ್ನೆಯನ್ನು ಕೇಳಿ.

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ರೋಗಗ್ರಸ್ತ ಕೈಗಾರಿಕೆಗಳಿಗೆ ಬಾಕಿ ಇರತಕ್ಕ ಸಹಾಯಧನ**

50(182) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) : ಮಾನ್ಯ ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) :

ಆ) ಇವುಗಳಿಗೆ ಸರ್ಕಾರದ ಸಹಾಯಧನವನ್ನು ಮಂಜೂರು ಮಾಡಲಾಗಿದೆಯೇ :

ಇ) ಹಾಗಿದ್ದಲ್ಲಿ, ಎಷ್ಟು ಸಣ್ಣ ಕೈಗಾರಿಕೆಗಳಿಗೆ ಮಂಜೂರು ಮಾಡಲಾಗಿದೆ :

ಈ) ರೋಗಗ್ರಸ್ತ ಕೈಗಾರಿಕೆಗಳಿಗೆ ಸರ್ಕಾರ ನೀಡುತ್ತಿದ್ದ ಸಹಾಯಧನವನ್ನು ಪೂರ್ತಿಯಾಗಿ ಪಾವತಿ ಮಾಡಲಾಗಿದೆಯೇ :

ಉ) ಇಲ್ಲವಾದಲ್ಲಿ, ಬಾಕಿ ಹಣವನ್ನು ಯಾವಾಗ ಪಾವತಿಸಲಾಗುವುದು ?

**ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :**

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 13331 ಸಣ್ಣ ಕೈಗಾರಿಕಾ ಘಟಕಗಳು ಇರುತ್ತವೆ.